

ಭಾಗಶಃ ಧರ್ಮಾಸ್ಪತ್ರೆಯಾದ್ದರಿಂದ ಎರಡು ಲಕ್ಷ ಎಂದು ಹೆದರಿಸಿದ್ದಾರೆ ಬೇರೆ. ಎಲ್ಲಿಗೆ ಹೋಗಲಿ ಎರಡು ಲಕ್ಷಕ್ಕೆ. ರೋಗಿಗೆ ಕೊಡುವ ಬ್ರೆಡ್ಡು ಹಾಲನ್ನೂ ಕಾಲ ಕಾಲಕ್ಕೆ ಕೊಡಬೇಕಾದರೆ ಕೈ ನೋಡುವ ಮಂದಿಗೆ ಕೊಡಲೂ ಕಾಸಿಲ್ಲದೆ ಅವರು ಮನಸ್ಸಿಗೆ ಬಂದಾಗ ಕೊಡಲಿ ಎಂದು ಬಿಟ್ಟವಳಿಗೆ ಅದೆಲ್ಲಿಂದ ಬರಬೇಕು. ತಾನೋ ಹೊರ ಹೋಗಿ ಆಸ್ಪತ್ರೆಯ ಎದುರಿನ ಗೂಡಂಗಡಿಯಲ್ಲಿ ಆ ಹಳಸಿದ ಬನ್ನುಗಳನ್ನು ತಿಂದುಕೊಂಡು ಬರುತ್ತಾಳೆ.

ರಾಗಿಣಿಗೆ ಅಳುವೊಂದೇ ಸಂಗಾತಿ. ಆದರೂ ಅಳುವುದಿಲ್ಲ. ಸಾಂತ್ವನ ಹೇಳುವ ಮಂದಿಯಿಲ್ಲದಿದ್ದರೆ ಅಳುವೂ ಬರುವುದಿಲ್ಲ. ಹಾಗಾಗಿ ಆಕೆಯ ಅಳುವೂ ಹೂತು ಹೋಗಿದೆ.

ಆರನೇ ವಯಸ್ಸಿನವರೆಗೆ ಚೂಟಿಯಾಗಿದ್ದ ಮಗ ಏಳಕ್ಕೆ ಕಾಲಿಟ್ಟವ ಒಂದು ದಿನ ಶಾಲೆಯಿಂದ ಬಂದವನೇ ಮಲಗಿದ್ದ. ಬೆವತು ತೊಪ್ಪೆಯಾಗಿದ್ದ ಮಗ ಶಾಲೆಯಲ್ಲಿ ಆಟವಾಡುತ್ತಿದ್ದಾಗಲೇ ಕುಳಿತುಬಿಟ್ಟಿದ್ದನೆಂದು ಶಾಲೆಯ ಟೀಚರೇ ಮನೆಗೆ ಕರೆದುಕೊಂಡು ಬಂದು ಬಿಟ್ಟು ಹೋಗಿದ್ದರು. ತಣ್ಣೀರು ಕುಡಿಸಿದ್ದಳು. ಸುಧಾರಿಸಿರಲಿಲ್ಲ. ನಡೆಯಲೂ ಕೂಡದ ಮಗುವನ್ನು